**Q.P. Code – 32305**

# Third Semester B.Com./B.B.M./B.H.M. Degree Examination, October/November 2019

*(CBCS – Semester Scheme – New)*

## ಕನ್ನಡ ಭಾಷೆ

## Paper III – ಚಂದ್ರಗಿರಿಯ ತೀರದಲ್ಲಿ ಮತ್ತು ವಿಚಾರ ನಂದನ – 3

*Time : 3 Hours]* *[Max. Marks : 90*

### ಭಾಗ – 'ಅ'

### ಕಾದಂಬರಿ – ಚಂದ್ರಗಿರಿಯ ತೀರದಲ್ಲಿ

I. (ಅ) **ಒಂದರ** ಸ್ವಾರಸ್ಯವನ್ನು ವಿವರಿಸಿ : **(1 × 5 = 5)**

1. "ಉಮ್ಮಾ" ಯಾವ ಹೆಣ್ಣು ನನ್ನ ನಾದಿರಾಳಾಗುವುದು ಸಾಧ್ಯವಿಲ್ಲ ನನ್ನ ಪಾಪುವಿನ ತಾಯಿಯಾಗವುದು ಸಾಧ್ಯವಿಲ್ಲ. ತಿಂದರೆ ಬಿರಿಯಾಣಿಯೇ ಬೇಕು, ಇಲ್ಲವಾದರೆ ಖಾಲಿ ಹೊಟ್ಟೆಯೆ ಇರಲಿ ಎನ್ನುವವನು ನಾನು. ನನ್ನ ನಾದಿರಾ ಅಲ್ಲಿ ಜೀವಂತ ಉರಿದು ಹೋಗುತ್ತಿದ್ದರೆ ನಾನು ಇಲ್ಲಿ ಇನ್ನೊಬ್ಬಳೊಡನೆ ಸುಖಿಸಲೇ? ಆಕೆಯೇನು ತಪ್ಪು ಮಾಡಿದ್ದಾಳೆಂದು ಆಕೆಗೆ ಈ ಶಿಕ್ಷೆ? ಇಲ್ಲ ಉಮ್ಮಾ, ನನ್ನನ್ನು ಬಲವಂತ ಮಾಡಬೇಡ.

2. 'ಅಕ್ಕಾ ಭಾವ ಎಷ್ಟು ಒಳ್ಳೆಯವರಲ್ಲವಾ? ಅವರಿನ್ನೂ ಬೇರೆ ಮದುವೆಯಾಗಿಲ್ಲವಂತೆ' ಎಂದು ಮೆಲ್ಲಗೆ ನುಡಿದಳು. ನಾದಿರಾಳ ಮರುಮದುವೆಯ ಪ್ರಯತ್ನವನ್ನು ತಿಳಿಯದ ಜಮೀಲ ವ್ಯಾಕುಲತೆಯಿಂದ ಹೀಗೆಂದಾಗ ನಾದಿರಾಳ ದುಃಖ ಕಟ್ಟೆಯೊಡೆಯಿತು. ಅದುವರೆಗೆ ಎದೆಯಲ್ಲಿ ಹೆಪ್ಪುಗಟ್ಟಿದ ನೋವು, ದುಃಖ ಆ ಕ್ಷಣದಲ್ಲಿ ಹೊರಕ್ಕೆ ಧುಮುಕಿತು. ತಂಗಿಯನ್ನು ತಬ್ಬಿಕೊಂಡು ಆಕೆಯ ಹೆಗಲಲ್ಲಿ ಮುಖವಿಟ್ಟು ಮನಪೂರ್ತಿ ಅತ್ತಳು ನಾದಿರಾ. ಅಕ್ಕನ ದುಃಖದಲ್ಲಿ ತಂಗಿಯೂ ಪಾಲುದಾರಳಾದಳು.

(ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. ಅಷ್ಟು ಚಿಕ್ಕ ಹುಡುಗಿ ನನಗೆ ಬೇಡಮ್ಮ.
2. ಅವಳನ್ನು ಸದ್ಯಕ್ಕೆ ನಾನು ಆ ಸೈತಾನನ ಮನೆಗೆ ಕಳುಹಿಸುವುದಿಲ್ಲ!
3. ನಾನು ನಾದಿರಾಳಿಗೆ ತಲಾಖ್ ಕೊಟ್ಟುಬಿಟ್ಟೆ.

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಅಮೀನಮ್ಮನ ಮಗ ಯಾರು?
2. ನಾದಿರಾಳ ತಾಯಿಯ ಹೆಸರೇನು?
3. ರಶೀದ್‌ನ ಅಂಗಡಿ ಯಾವ ಊರಿನಲ್ಲಿತ್ತು?
4. ಮೊಹಮದ್ ಖಾನ್‌ರ ಸ್ನೇಹಿತ ಯಾರು?
5. ಸಾರಾ ಅಬೂಬಕ್ಕರ್‌ನ ಯಾವ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ?

INFORMATION CENTRE

(ಈ) ಎರಡಕ್ಕೆ ಟಿಪ್ಪಣಿ ಬರೆಯಿರಿ : (2 × 2 = 4)

1. ಜಮೀಲೆ

2. ಶೇಕ್ ಅಲಿ

3. ತಲಾಖ್

II. (ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2 × 5 = 10)

1. ಮೊಹಮದ್ ಖಾನ್‌ರ ವ್ಯಕ್ತಿತ್ವವನ್ನು ಕುರಿತು ಬರೆಯಿರಿ.

2. ರಶೀದನ ಮಾನವೀಯ ಗುಣಗಳಾವುವು? ಚರ್ಚಿಸಿ.

3. ಫಾತಿಮಾ ಅನುಭವಿಸಿದ ಕಷ್ಟದ ಬದುಕನ್ನು ವಿವರಿಸಿ.

(ಆ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ನಾದಿರಾ – ರಷೀದ್‌ರ ದಾಂಪತ್ಯದ ಬದುಕನ್ನು ಚಿತ್ರಿಸಿ.

2. ಹೊಸಮನೆ ಸಲೀಂ, ಫಾತಿಮಾ, ಅಮೀನಮ್ಮ ಇವರಲ್ಲಿ ಎರಡು ಪಾತ್ರಗಳನ್ನು ಕುರಿತು ಬರೆಯಿರಿ.

3. ಧರ್ಮದ ಹೆಸರಿನಲ್ಲಿ ನಡೆಯುವ ಹೆಣ್ಣಿನ ಶೋಷಣೆಯು ನಾದಿರಾಳ ಬದುಕನ್ನು ದುರಂತಕ್ಕೀಡು ಮಾಡಿದ ಸಂದರ್ಭವನ್ನು ಚರ್ಚಿಸಿ.

ಭಾಗ – 'ಆ'

ವಿಚಾರ ನಂದನ – 3

III. (ಅ) ಒಂದರ ಸ್ವಾರಸ್ಯವನ್ನು ವಿವರಿಸಿ : (1 × 5 = 5)

1. ಯುವಕರು "ನಿರಂಕುಶಮತಿಗಳಾಗಬೇಕು" ನಿರಂಕುಶಮತಿತ್ವ ಎಂದರೆ ನಿರಂಕುಶ ಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೆ "ನಿರಂಕುಶಮತಿ".

2. ಹೀಗೆ ನಡೆದವನಿಗೆ ಜಗತ್ತು ಹೇಗೆ ಕಾಣಿಸಬಹುದು? ಐಕ್ಯತೆ ದೈವದಂತೆ ಭಿನ್ನತೆ ದೆವ್ವದಂತೆ, ಜಗತ್ತು ಒಂದು ಕುಟುಂಬದಂತೆ. ಹೀಗೆ ಭಾವಿಸಿದಾಗ ಮಾತ್ರವೆ 'ಉಪವಾಸ'ವನ್ನು ಸತ್ಯಾಗ್ರಹವನ್ನಾಗಿ ಮಾಡಲು ಆಗುತ್ತದೆ. ಯಾಕೆಂದರೆ ಉಪವಾಸವು ಸತ್ಯಾಗ್ರಹವಾಗಿ ಪರಿಣಮಿಸುವುದು ತನ್ನವರೊಡನೆ ಅಥವಾ ಎದುರಾಳಿ ತನ್ನವರೆಂಬ ಭಾವನೆ ಇದ್ದಲ್ಲಿ ಮಾತ್ರ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಮಾನವನ ಸರ್ವೋತ್ಕೃಷ್ಟವಾದ ಆಯುಧ ಯಾವುದು?
2. ಗೌತಮ ಬುದ್ಧನ ಗೆಳೆಯ ಯಾರು?
3. ಭಾರತೀಯ ಕ್ಷಿಪಣಗಳ ಜನಕ ಯಾರು?
4. ಪ್ರಾತಃ ಸ್ಮರಣೀಯರಾದ ಪಂಚಕನ್ಯೆಯರು ಯಾರು?
5. 'ಕಡಲತೀರದ ಭಾರ್ಗವ' ಎಂದು ಯಾರನ್ನು ಕರೆಯುತ್ತಾರೆ?

STATE SIDDAGANGA COLLEGE OF ARTS, SCIENCE & COMMERCE FOR WOMEN
LIBRARY & INFORMATION CENTRE
Acc. No.........
Date.........

(ಇ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2 × 5 = 10)

1. ಮತಭ್ರಾಂತಿ
2. ಪಿ. ಲಂಕೇಶ್
3. ಲಿಂಗತಾರತಮ್ಯ

IV. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : (2 × 10 = 20)

1. ಶಿವರಾಮ ಕಾರಂತರು ಬದುಕನ್ನು ಸ್ವೀಕರಿಸುವ ರೀತಿಯನ್ನು ಕುರಿತು ಬರೆಯಿರಿ.
2. ಗಾಂಧಿ ಮತ್ತು ಅಂಬೇಡ್ಕರ್ ವ್ಯಕ್ತಿತ್ವವು ದೇವನೂರು ಮಹಾದೇವ ಅವರ ಚಿಂತನೆಗಳಲ್ಲಿ ಮೂಡಿ ಬಂದ ಬಗೆಯನ್ನು ವಿವರಿಸಿ.
3. ನಿಸರ್ಗದ ಬಗೆಗಿನ ನಾಗೇಶ್ ಹೆಗಡೆಯವರ ಚಿಂತನೆಗಳನ್ನು ಸಂಗ್ರಹಿಸಿ ಬರೆಯಿರಿ.

---